## ಕಲ್ಪನೆ



ಮಂಜು ಕವಿದ ಬೆಳಗು ಪಕಳೆ ಅರಳಿಸುತ್ತಿದೆ. ಆ ಬೆಳಗು ಯಮುನೆಯಿಂದಲೇ ಹುಟ್ಟಿಬರುತ್ತಿರುವಂತಿದೆ.ನೀರ ಅಲೆಗಳಿಗೇ ರೆಕ್ಕೆಬಂದು ಪಕ್ಷಿಗಳಾಗಿ ಹಾರುತ್ತಿರುವಂತೆ ಭಾಸವಾಗುತ್ತಿದೆ. ಹೂ ಬಿರಿದಂತಹ ಮುಂಜಾನೆ, ಯಮುನೆಯ ಅಲೆಗಳು, ದೋಣಿಕಾರ, ಪಕ್ಷಿಸಂಭ್ರಮ – ಕಾವ್ಯದ ರೆಕ್ಕೆ ಬಿಚ್ಚಿಕೊಳ್ಳಲು ಮತ್ತೇನು ಬೇಕು? ಇಂತಹುದ್ದೇ ಯಾವುದೋ ಕ್ಷಣದಲ್ಲಿ ಬೇಂದ್ರೆಯವರಿಗೆ 'ಹಕ್ಕಿ ಹಾರಿತು ನೋಡಿದಿರಾ?' ಎನ್ನುವ ಸಾಲು ಹೊಳೆದಿರಬೇಕು. ಈ ಚಿತ್ರಪಟ ನೋಡಿದಾಗ ನಿಮ್ಮೊಳಗೆ ಹೊಳೆದ ಭಾವಗಳೇನು? ಆ ಭಾವಗಳಿಗೆ ಕವಿತೆಯ ಅಂಗಿ ತೊಡಿಸಿ, ನಮಗೆ ಕಳಿಸಿಕೊಡಿ...

ನಿಮ್ಮ ಕಲ್ಪನೆಯ ಕವಿತೆ ಜನವರಿ 15ರ ಒಳಗೆ ನಮಗೆ ತಲುಪಬೇಕು.

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
**ಇ–ಮೇಲ್:** editormy@mayura.co.in